ಇಂದಿನಿಂದ ಕೃಷಿ ಮೇಳ: ಫಲಪುಷ್ಪ ಪ್ರದರ್ಶನ

ಧಾರವಾಡ: ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಧಾರವಾಡ ಕೃಷಿ ಮೇಳಕ್ಕೆ ಕ್ಷಣಗಣನೆ ಶುರುವಾಗಿದೆ.

ಕೃಷಿಕ-ಕೃಷಿ ಮಹಿಳೆಯರ ನೆತ್ತಿಗೆ ಜ್ಞಾನ ತುಂಬಲು ಕೃವಿವಿ ಆವರಣ ರೈತರ ಜಾತ್ರೆಗೆ ಸಕಲ ಸಿದ್ಧತೆ ಪೂರ್ಣಗೊಂಡಿವೆ. 'ಸುಸ್ಥಿರ ಕೃಷಿಗಾಗಿ ಸಿರಿಧಾನ್ಯಗಳು' ಘೋಷ ವಾಕ್ಯದಡಿ ಸೆ.9ರಿಂದ 12ರವರೆಗೆ 4 ದಿನ ನಡೆಯುವ ಮೇಳದಲ್ಲಿ ಕೃಷಿ ಉಪಕರಣ ಪ್ರದರ್ಶನ, ಮಾರಾಟ, ಫಲಪುಷ್ಪ, ಶ್ವಾನ, ಕುರಿ-ಕೋಳಿ ಪ್ರದರ್ಶನ, ಗೋಷ್ಠಿಗಳು ನಡೆಯಲಿವೆ. 2023ರ ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಹಿನ್ನಲೆ ಸಿರಿಧಾನ್ಯ ಉತ್ಪಾದನೆ, ಸಾವಯವ ಕೃಷಿ, ಮೌಲ ವರ್ಧನೆ, ಮಾರುಕಟ್ಟೆ ಜತೆಗೆ ಸಂಶೋಧನೆಗೂ ಕೃಷಿ ಮೇಳದಲ್ಲಿ ಹೆಚ್ಚಿ ಒತ್ತು ನೀಡಿರುವುದು ಮೇಳದ ವಿಶೇಷತೆ.

ಸೆ.9ರ ಬೆಳಗ್ಗೆ 10.30ಕ್ಕೆ ಸಿಎಂ ಸಿದ್ದರಾಮಯ್ಯ ಮೇಳ ಉದ್ಘಾಟಿಸಲಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ, ಸಚಿವರಾದ ಪ್ರಹ್ಲಾದ್ ಜೋಶಿ, ಸಂತೋಷ ಲಾಡ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಳ್ಳಲಿದ್ದಾರೆ. ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಕೃತಿ ಬಿಡುಗಡೆ ಮಾಡಲಿದ್ದು, ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ. ಪಾಟೀಲ, ಶಿವಾನಂದ ಪಾಟೀಲ, ಸತೀಶ ಜಾರಕಿ ಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಜನಪ್ರತಿನಿಧಿಗಳು ಸಾಕ್ಷಿಯಾಗಲಿದ್ದಾರೆ. ಕೃಷಿಯಲ್ಲಿ ಡ್ರೋನ್ ಬಳಕೆ ಅರಿವು, ಮಾಹಿತಿ,



600ಕ್ಕೂ ಹೆಚ್ಚು ಮಳಿಗೆ

ಕೃಷಿ ಮೇಳ ವಸ್ತು ಪ್ರದರ್ಶನಕ್ಕೆ 199 ಹೈಟೆಕ್ ಮಳಿಗೆ, 351 ಸಾಮಾನ್ಯ ಮಳಿಗೆ, 24 ಯಂತ್ರೋಪಕರಣ ಮಳಿಗೆ, 38 ಆಹಾರ ಮಳಿಗೆ, 50 ಜಾನುವಾರು ಮಳಿಗೆ, 10 ಕ್ಷೇತ್ರ ಮಳಿಗೆ, 24 ಸಿರಿಧಾನ್ಯ ಮಳಿಗೆ ಹಾಗೂ 10 ಸಾವಯವ ಮಳಿಗೆಗಳನ್ನು ತೆರೆದಿದೆ.

ಕೃಷಿಕರ ಶ್ರಮ ಕಡಿತದ ಸಾಧನಗಳ ಪ್ರದರ್ಶನ ಗಮನಾರ್ಹ. 14 ರೈತರಿಗೆ ಶ್ರೇಷ್ಠ ಕೃಷಿ ಪ್ರಶಸ್ತಿ ವಿತರಣೆ ನಡೆಯಲಿದೆ. 4 ದಿನಗಳಲ್ಲಿ 10 ಲಕ್ಷ ರೈತರು ಭಾಗವಹಿಸುವ ನಿರೀಕ್ಷೆ ಇದೆ. ಮೇಳಕ್ಕೆ ಬರುವವರ ಅನಕೂಲಕ್ಕಾಗಿ ಮೊಬೈಲ್ ಎಟಿಎಂ ವಾಹನ, ಕ್ಷೇತ್ರ ಪ್ರಾತ್ಯಕ್ಷಿಕೆ ಭೇಟಿ, ವೈದ್ಯಕೀಯ ಸಲಹಾ ಕೇಂದ್ರ ತೆರೆದಿದ್ದು, ಕೃಷಿ ಮೇಳದ ಆವರಣ ವಿಮಾ ವ್ಯಾಪ್ತಿಗೆ ಒಳಪಡಿಸಿ, ರೈತರ ಜಾತ್ರೆಗೆ ವ್ಯವಸ್ಥೆ ಮಾಡಿದೆ.

09-09-2023
Hosadiganta Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in